870 ಶ್ರೀ ಮಾಲಿಕಯ್ಯ ವೆಂಕಯ್ಯ ಗುತ್ತೇದಾರ್ (ಅಫ್ಜಲ್‌ಪುರ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವ ಯೋಜನೆ ಅಡಿಯಲ್ಲಿ ಮಂಜೂರಾಗಿರುವ ಗುಲ್ಬರ್ಗಾ ಹೊಸೂರು ರಸ್ತೆ ಕಾಮಗಾರಿ ಪ್ರಾರಂಭಿಸಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಾಮಗಾರಿ ಪ್ರಾರಂಭಿಸುವುದಕ್ಕೆ ಇರುವ ಅಡಚಣೆಗಳನ್ನು ನಿವಾರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ಇ) ಈ ರಸ್ತೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಿ ಮುಗಿಸಲಾಗುತ್ತದೆ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಗುಲ್ಬರ್ಗಾದಿಂದ ಹೊಸೂರುವರೆಗಿನ 99 ಕಿಮೀ, ರಸ್ತೆ ಅಭಿವೃದ್ಧಿಯನ್ನು ಕೆಶಿಪ್–2ರ ಅಡಿಯಲ್ಲಿ ಕೈಗೊಳ್ಳಲಾಗುತ್ತಿದ್ದು, ಯೋಜನೆಯ ಮೊದಲ ಹಂತದಲ್ಲಿ ಗುಲ್ಬರ್ಗಾದಿಂದ ಚೌಡಾಪುರವರೆಗಿನ 29 ಕಿ.ಮೀ.ಗಳ ರಸ್ತೆಯ ಅಭಿವೃದ್ಧಿಯನ್ನು ವಿಶ್ವಬ್ಯಾಂಕ್‌ನ ಆರ್ಥಿಕ ನೆರವಿನಲ್ಲಿ ಕೈಗೊಳ್ಳಲು ಯೋಜಿಸಲಾಗಿದೆ. ಈ ಕಾಮಗಾರಿಯ ಗುತ್ತಿಗೆ ದಸ್ತಾವೇಜುಗಳಿಗೆ ವಿಶ್ವಬ್ಯಾಂಕ್‌ನ ಅನುಮೋದನೆ ನಿರೀಕ್ಷಿಸಲಾಗಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ವಿಶ್ವಬ್ಯಾಂಕ್‌ನಿಂದ ಅನುಮೋದನೆ ದೊರೆತ ಮೇಲೆ ಗುತ್ತಿಗೆ ಕರೆದು ತದನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಹಾಗೂ ಈ ರಸ್ತೆಯ ಚೌಡಾಪುರದಿಂದ ಹೊಸೂರು ವರೆಗಿನ ರಸ್ತೆಯ ಅಭಿವೃದ್ಧಿಯನ್ನು ಯೋಜನೆಯ ಮುಂದಿನ ಹಂತಗಳಲ್ಲಿ ಆರ್ಥಿಕ ಲಭ್ಯತೆಯ ಅನುಗುಣವಾಗಿ ಕೈಗೊಳ್ಳಲು ಯೋಜಿಸಲಾಗಿದೆ.

1098 ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ತಾಲ್ಲೂಕು ಬಿದರಗೋಡಿನಲ್ಲಿ ನಕ್ಸಲರ ಹಲ್ಲೆ ಮತ್ತು ಬೆಂಕಿ ಪ್ರಕರಣದಲ್ಲಿ ಹತ್ತಾರು ಲಕ್ಷ ರೂ.ಗಳನ್ನು ಕಳೆದುಕೊಂಡ ಅರುಣಕುಮಾರ್ ಮತ್ತು ಕಿರಣಕುಮಾರ್ ಕುಟುಂಬಕ್ಕೆ ಗೃಹ ಇಲಾಖೆ ಅಥವಾ ಸರ್ಕಾರ ಯಾವುದಾದರೂ ಪರಿಹಾರ ನೀಡಿದೆಯೇ; ಇಲ್ಲದಿದ್ದಲ್ಲಿ ಕಾರಣವೇನು;

ಆ) ಗೃಹ ಇಲಾಖೆ, ನಕ್ಸಲ್ ಪ್ಯಾಕೇಜ್ ಮೂಲಕ ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ನೀಡಿದ ಆರ್ಥಿಕ ನೆರವು ಎಷ್ಟು? ಮತ್ತು ಕಾರ್ಯಕ್ರಮ ಯಾವುದು;

ಇ) ಗೃಹ ಇಲಾಖೆಯ ಅಧಿಕಾರಿಗಳು ಕ್ಷೇತ್ರದ ಜನಪ್ರತಿನಿಧಿಗಳ ಜೊತೆ ನಕ್ಸಲ್ ಸಮಸ್ಯೆ ಬಗೆಗೆ ಚರ್ಚಿಸಿದ್ದಾರೆಯೇ;

ಈ) ನಕ್ಸಲ್ ಪೀಡಿತ ಪ್ರದೇಶದಲ್ಲಿ ಮೂಲಭೂತ ಸಮಸ್ಯೆಯನ್ನು ಬಗೆಹರಿಸಲು ಗೃಹ ಇಲಾಖೆ ಹಮ್ಮಿಕೊಂಡ ಕಾರ್ಯಕ್ರಮ ಯಾವುದು?

ಶ್ರೀ ಡಾ.ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಈ ಬಗ್ಗೆ ಶ್ರೀ ಅರುಣ್ ಕುಮಾರ್ ಮತ್ತು ಶ್ರೀ ಕಿರಣ್ ಕುಮಾರ್ ರವರ ಕುಟುಂಬಕ್ಕೆ ಪರಿಹಾರವನ್ನು ನೀಡಿರುವುದಿಲ್ಲ. ಕಾರಣ ಪ್ರಸ್ತುತ ಇರುವ ನಿಯಮಾವಳಿಗಳಲ್ಲಿ ಪರಿಹಾರ ನೀಡಲು ಅವಕಾಶ ಇಲ್ಲದೆ ಇರುವುದರಿಂದ ಸದರಿ ಕುಟುಂಬದವರಿಗೆ ಪರಿಹಾರವನ್ನು ನೀಡಿರುವುದಿಲ್ಲ.

No compensation has been paid to the victims, as there is no provision in the existing rules.

ಆ) ಸರ್ಕಾರವು ನಕ್ಸಲ್ ಪ್ಯಾಕೇಜ್ ಮೂಲಕ ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದ ನಕ್ಸಲ್ ಪೀಡಿತ ಪ್ರದೇಶಗಳಿಗೆ 2009–10ನೇ ಸಾಲಿನಲ್ಲಿ ದೂರ ಮತ್ತು ಅತಿ ಹಿಂದುಳಿದ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ರೂ.160.00 ಲಕ್ಷ ಬಿಡುಗಡೆ ಮಾಡಿರುತ್ತದೆ.

During 2009-10 a sum of Rs. 160.00 lakhs has been sanctioned for various developmental programmes by the Government to the naxal prone areas and backward areas of Thirthahalli Legislative Constituency.

ಇ) ನಕ್ಸಲ್ ಪೀಡಿತ ಪ್ರದೇಶಗಳಿಗೆ ಸರ್ಕಾರವು ಯೋಜಿಸಿರುವ ನಕ್ಸಲ್ ಪ್ಯಾಕೇಜನ್ನು ಅಭಿವೃದ್ಧಿ ಯೋಜನೆಗಳ ಇಲಾಖೆಗಳ ಮುಖಾಂತರ ಜಾರಿಗೊಳಿಸಿದ್ದು, ಪ್ರಾರಂಭಿಕ ಹಂತದಲ್ಲಿ ಗೃಹ ಇಲಾಖೆಯ ಅಧಿಕಾರಿಗಳು ಕ್ಷೇತ್ರದ ಜನಪ್ರತಿನಿಧಿಗಳ ಜೊತೆ ಮತ್ತು ಇತರೆ ಇಲಾಖೆಯ ಅಧಿಕಾರಿಗಳೊಂದಿಗೆ ನಕ್ಸಲ್ ಸಮಸ್ಯೆಯ ಬಗ್ಗೆ ಕಾಲಕಾಲಕ್ಕೆ ಚರ್ಚಿಸಿರುತ್ತಾರೆ.

The package is being implemented by other development departments. However in the initial stage discussions were held with all concerned departmental heads and elected representatives.

ಜಿಲ್ಲಾ ಪಂಚಾಯತ್ ಮತ್ತು ವಿವಿಧ ಇಲಾಖೆಗಳ ಸಹಯೋಗ ದೊಂದಿಗೆ ಗೃಹ ಇಲಾಖೆಯು ನಕ್ಸಲ್ ಪೀಡಿತ ಪ್ರದೇಶದಲ್ಲಿ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸಲು ನಿರುದ್ಯೋಗಿ ಯುವಕರಿಗೆ ಕಂಪ್ಯೂಟರ್

ತರಬೇತಿಯನ್ನು ನೀಡಲಾಗಿದೆ. ಅಲ್ಲದೆ, ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಕರಪತ್ರಗಳ ಮೂಲಕ ಪೊಲೀಸರಿಂದ ಮಾಹಿತಿಯನ್ನು ಸಹ ನೀಡಲಾಗುತ್ತಿದೆ.

In co-ordination with various departments, the police are attending to the basic problems of naxal prone areas. Computer training was provided to the youths in co-operation with the Zilla Panchayath. Pamphlets/handbills containing information reguarding development programmes are being distributed to the public to educate them.

283 ಶ್ರೀ ನಾಡಗೌಡ ವೆಂಟಕರಾವ್(ಸಿಂಧನೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಲ್ಲಿನ ಕೆಶಿಫ್ ಸಂಸ್ಥೆಯಡಿಯಲ್ಲಿ 2ನೇ ಹಂತಕ್ಕೆ ಸಂಬಂಧಪಟ್ಟಂತೆ ಕಾಮಗಾರಿಗಳ ಪ್ರಸ್ತಾವನೆಯನ್ನು ವಿಶ್ವ ಬ್ಯಾಂಕಿಗೆ ಯಾವಾಗ ಕಳುಹಿಸಲಾಗಿದೆ ಹಾಗೂ ಅಲ್ಲಿಂದ ಯಾವಾಗ ಅನುಮೋದನೆ ಪಡೆದುಕೊಳ್ಳಲಾಗಿದೆ; (ಉಲ್ಲೇಖಗಳಗೊಂಡ ವಿವರಗಳನ್ನು ಒದಗಿಸುವುದು);

ಆ) ಈ ಯೋಜನೆಯಡಿಯಲ್ಲಿನ ಕಾಮಗಾರಿಗಳಿಗೆ ಕೇಂದ್ರ ಸರ್ಕಾರ ಮತ್ತು ವಿಶ್ವಬ್ಯಾಂಕ್ ಅನುಮೋದನೆ ಪಡೆದುಕೊಂಡ ನಂತರ 2008–09, 2009–10 ಹಾಗೂ 2010–11 ರ ಸಾಲಿಗೆ ತೆಗೆದುಕೊಳ್ಳಲು ನಿಯೋಜಿಸಲಾದ ಕಾಮಗಾರಿಗಳ ಹಾಗೂ ಈ ಕಾಮಗಾರಿಗಳಿಗೆ ನಿಗಧಿಪಡಿಸಿದ ಹಣವೆಷ್ಟು; (ವಿವರ ನೀಡುವುದು);

ಇ) ಈ ಸಾಲಿನಲ್ಲಿ ಸದರಿ ಯೋಜನೆಯಡಿಯಲ್ಲಿ ವಿಶ್ವಬ್ಯಾಂಕ್ ಅನುಮೋದನೆ ನೀಡಿ ನಿಗಧಿಪಡಿಸಿದ ಕಾಮಗಾರಿಗಳನ್ನು ಬದಲಾವಣೆ ಮಾಡಿರುವ ಪ್ರಕರಣಗಳು ಇದೆಯೇ ಹಾಗೂ ಬದಲಾವಣೆಗೆ ವಿಶ್ವಬ್ಯಾಂಕಿನ ಅನುಮೋದನೆ ದೊರಕಿದೆಯೇ; ಇದ್ದಲ್ಲಿ ತಾಂತ್ರಿಕ ಸಕಾರಣಗಳನ್ನು ಒಳಗೊಂಡ ವಿವರಗಳನ್ನು ಒದಗಿಸುವುದು ಬದಲಾವಣೆ ಪ್ರಕ್ರಿಯೆಯಿಂದ ಕಾಲವ್ಯಯವಾಗಿ ನಿಗಧಿಪಡಿಸಲಾದ ಅನುದಾನವನ್ನು ಬಳಕೆ ಮಾಡಲಾಗದೇ ಲ್ಯಾಪ್ಸ್ ಆಗಿರುವುದು ನಿಜವೇ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಕೆಶಿಫ್–2ನೇ ಹಂತದ ಯೋಜನೆಗೆ ವಿಶ್ವ ಬ್ಯಾಂಕಿನ ಆರ್ಥಿಕ ನೆರವನ್ನು ಕೋರಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸರ್ಕಾರದ ಪತ್ರ ಸಂಖ್ಯೆ